**ದಿನಾಂಕಃ 24/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಬಿ.ಎನ್ ವಕೀಲರಿಂದಃ**

4. ನಮ್ಮ ಮನೆಯ ಪಕ್ಕ ಅನಿಲ್, ಸಾವಿತ್ರಿ, ಶಿವಣ್ಣ, ಕೃಷ್ಣಯ್ಯ ಮತ್ತು ಮೋಹನ ರವರ ಮನೆ ಇದೆ ಎಂದರೆ ಸರಿ. ಗಲಾಟೆ ಸಮಯಕ್ಕೆ ಸುಮಾರು 10 ಜನ ಸೇರಿದ್ದರು. ಅವರ ಹೆಸರು ಜವರಮ್ಮ, ಕಾಂತರಾಜು, ವೆಂಕಟೇಶ, ಮಹದೇವಮ್ಮ, ಸಿದ್ದಮ್ಮ, ಮಾದಪ್ಪ ಉರುಫ್ ಮಾದೇಶ, ಸಾವಿತ್ರಿ, ಸ್ವರ್ಣಮ್ಮ ಇದ್ದರು. ಸ್ವರ್ಣಮ್ಮ ಎಂದರೆ 3 ನೇ ಆರೋಪಿಯ ಅಮ್ಮ. ಚಾಸಾ–5 ನನ್ನ ಚಿಕ್ಕಪ್ಪನ ಮಗ. ಚಾಸಾ–4 ಮತ್ತು 6 ನನಗೆ ಸಂಬಂಧಿಕರಲ್ಲ. ಚಾಸಾ–7 ನಮ್ಮ ಕುಲಸ್ಥ. ಚಾಸಾ–3 ನನ್ನ ತಾಯಿ. ಚಾಸಾ–2 ನನ್ನ ಹೆಂಡತಿ. ಚಾಸಾ–4, 5 ಮತ್ತು 7 ರವರ ಮನೆ ನಮ್ಮ ಮನೆಯ ಅಕ್ಕಪಕ್ಕದಲ್ಲಿಲ್ಲ. ಆದರೆ ಚಾಸಾ–6 ರವರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ.

5. 3 ನೇ ಆರೋಪಿಯ ಮಗ ನನ್ನ ಮಗನ ಕಣ್ಣನ್ನು ಪರಚಿದ್ದರು. ನಮ್ಮ ಮನೆಯ ಮುಂದೆ ನನ್ನ ಮಗನಿಗೆ ಜಗಳಕ್ಕೆ ಹೋಗಬೇಡ ಎಂದು ಬುದ್ದಿವಾದ ಹೇಳುತ್ತಿದ್ದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಯಾರೋ ನನ್ನ ಮಗನ ಬಲಗೆನ್ನೆಗೆ ಹೊಡೆದು ಗಾಯಮಾಡಿದ್ದರು ಎಂದು ತಿಳಿಸಿದ್ದು ತಪ್ಪಾಗಿದೆ. ನನ್ನ ಮಗನಿಗೆ ಪರಚಿದ್ದರಿಂದ ಸ್ವಲ್ಪ ರಕ್ತಗಾಯವಾಗಿ ರಕ್ತ ಬಂದಿತ್ತು. ನನ್ನ ಮಗನಿಗೆ ವೈದ್ಯರ ಮುಖಾಂತರ ಚಿಕಿತ್ಸೆ ಕೊಡಿಸಿಲ್ಲ. ಗಲಾಟೆಯಾಗುವಾಗ ಕತ್ತಲಾಗಿರಲಿಲ್ಲ. ಸಂಜೆ 6.00 ಗಂಟೆಯಿಂದ 6.30 ಗಂಟೆಯವರೆಗೆ ಗಲಾಟೆಯಾಗಿದೆ. 1 ನೇ ಆರೋಪಿತ ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದರು. 2 ನೇ ಆರೋಪಿತ ನನ್ನ ಕತ್ತನ್ನು ಹಿಡಿದುಕೊಂಡರು. 3 ನೇ ಆರೋಪಿ ದೊಣ್ಣೆಯಿಂದ ನನ್ನ ಎಡ ಕತ್ತು ಮತ್ತು ಭುಜಕ್ಕೆ ಹೊಡೆದರು. 4 ನೇ ಆರೋಪಿ ದೊಣ್ಣಯಿಂದ ನನ್ನ ಹೆಂಡತಿಯ ಬಲ ತೋಳಿಗೆ ಹೊಡೆದರು. ನಾನು ನನ್ನ ಹೆಂಡತಿಯನ್ನು ಹೊಡೆಯುವಾಗ ನೋಡಿದೆ. ಸಾಕ್ಷಿಗೆ ಮು.ಮಾ.1 ಮತ್ತು 2 ರಿಂದ ಹಲ್ಲೆ ಮಾಡಿದ್ದಾ ಎಂದರೆ ಸಾಕ್ಷಿಯು ಇನ್ನೊಂದು ದೊಣ್ಣೆ ಮು.ಮಾ–2 ಹಲ್ಲೆ ಮಾಡುವಾಗ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಒಂದು ದೊಣ್ಣೆ

ನ್ಯಾಯಾಲಯದ ಮುಂದೆ ಇದೆ, ಆದರೆ ಇನ್ನೊಂದು ದೊಣ್ಣೆ ನ್ಯಾಯಾಲಯದ ಮುಂದಿಲ್ಲವೆಂದು ನುಡಿಯುತ್ತಾರೆ. ಮು.ಮಾ.1 ಮತ್ತು 2ರ ಪೈಕಿ ಒಂದನ್ನು ಮಾತ್ರ ನಾವು ನೀಡಿದ್ದೆವು. ಮು.ಮಾ.2ನ್ನು ನಾವು ನೀಡಿರಲಿಲ್ಲ ಎಂದು ನುಡಿಯುತ್ತಾರೆ. ಮು.ಮಾ.2ರಲ್ಲಿರುವ ಕೊಂಬೆ ಇರುವುದನ್ನು ಈಗಲೇ ನೋಡುತ್ತಿರುವುದು. ಮು.ಮಾ.1ನ್ನು ನಮ್ಮ ಮನೆಯ ಹತ್ತಿರ ನೋಡಿದ್ದೆ. ಮು.ಮಾ.2ನ್ನು ಇದೇ ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಮು.ಮಾ.1 ಬೇಲಿಯ ಹತ್ತಿರ ಸೌದೆ ಹಾಕಿಕೊಂಡಿರುವ ಕಡೆ ಇತ್ತು. ಮು.ಮಾ.1 ರೀತಿಯ ಬೇರೆ ದೊಣ್ಣೆಗಳು ಇದ್ದವು ಎಂದರೆ ಸಾಕ್ಷಿಯು ಬೇರೆ ರೀತಿಯ ದೊಣ್ಣೆಗಳು ಇದ್ದವು ಎಂದು ನುಡಿಯುತ್ತಾರೆ. ಸೌದೆ ಹಾಕಿಕೊಂಡಿರುವ ಜಾಗವು ಆರೋಪಿತರ ಜಾಗದಲ್ಲಿರುತ್ತದೆ. ಮು.ಮಾ.1ನ್ನು ನಾನೇ ಪೊಲೀಸರಿಗೆ ನೀಡಿರುತ್ತೇನೆ. ಇನ್ನೊಂದು ದೊಣ್ಣೆ ಮು.ಮಾ.1 ರೀತಿಯ ದೊಣ್ಣೆ ಇದ್ದು, ಅದು ಅರ್ಧ ಅಡಿ ಉದ್ದ ಜಾಸ್ತಿಯಿತ್ತು. ಇನ್ನೊಂದು ದೊಣ್ಣೆಯು ಗುಂಡಗೆ ಮು.ಮಾ.1ರ ರೀತಿ ಇತ್ತು. ಹಳ್ಳಿಗಳ ಕಡೆ ದೊಣ್ಣೆ ಎಂದರೆ ಬೇರೆ, ರಿಪೀಸ್ ಪಟ್ಟಿ ಬೇರೆ ಎಂದರೆ ಸರಿ. ನನ್ನ ಕತ್ತಿಗೆ ರಿಪೀಸ್ ಪಟ್ಟಿಯಿಂದ ಹೊಡೆದರು. ಎರಡು ದೊಣ್ಣೆ ಮತ್ತು ಒಂದು ರಿಪೀಸ್ ಪಟ್ಟಿಯನ್ನು ಪೊಲೀಸರಿಗೆ ನೀಡಿದ್ದೆವು. ಆ ರಿಪೀಸ್ ಪಟ್ಟಿ ಈ ದಿನ ನ್ಯಾಯಾಲಯದ ಮುಂದೆ ಇಲ್ಲ. ನನ್ನ ಮುಖ್ಯ ವಿಚಾರಣೆಯ ಕಾಲಕ್ಕೆ ರಿಪೀಸ್ ಪಟ್ಟಿಯನ್ನು ನ್ಯಾಯಾಲಯದ ಮುಂದೆ ನೋಡಿರಲಿಲ್ಲ.

6. ನನಗೆ ರಕ್ತ ಬರುವ ಗಾಯವಾಗಿರಲಿಲ್ಲ, ಆದರೆ ಬಾಸುಂಡೆ ಗಾಯವಾಗಿತ್ತು. ನನಗೆ ಬೆನ್ನಿನ ಪೂರಾ ಬಾಸುಂಡೆ ಗಾಯಗಳು ಆಗಿದ್ದವು. ನನಗೆ ಪರಚಿದ ರೀತಿಯ ಬಾಸುಂಡೆ ಗಾಯವಾಗಿತ್ತು. ನನ್ನ ಹೆಂಡತಿಗೆ ರಕ್ತಗಾಯವಾಗಿರಲಿಲ್ಲ, ಆದರೆ ಚರ್ಮ ತರಚಿದ ಗಾಯವಾಗಿ, ಬಿಳಿ ಚರ್ಮ ಕಾಣಿಸುತ್ತಿತ್ತು. ನನಗೆ ಮತ್ತು ನನ್ನ ಹೆಂಡತಿಗೆ ಆಳವಾದ ಗಾಯವಾಗಿರಲಿಲ್ಲ, ಆದರೆ ನನ್ನ ಹೆಂಡತಿಗೆ 5 ಇಂಚಿನ ಗಾಯವಾಗಿತ್ತು.

7. ನಾನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ 2 ದಿನ ಚಿಕಿತ್ಸೆ ಪಡೆದೆ. ನಾನು ಪ್ರಜ್ಞೆ ತಪ್ಪಿ ಬಿದ್ದಿರಲಿಲ್ಲ. ಬೆಟ್ಟದಪುರದಲ್ಲೂ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಬೆಟ್ಟದಪುರ

ಆಸ್ಪತ್ರೆಯಲ್ಲಿ ಡಾಕ್ಟರ್ ಇರಲಿಲ್ಲ. ನಾನು, ನನ್ನ ಹೆಂಡತಿ ಬೈಕಿನಲ್ಲಿ ಬಂದು ಸಂಜೆ 7.15 ಗಂಟೆಗೆ ಆಸ್ಪತ್ರೆಗೆ ದಾಖಲಾದೆವು. ಸಂಜೆ 7.50-8.00 ಗಂಟೆಗೆ ನನಗೆ ಮತ್ತು ನನ್ನ ಹೆಂಡತಿಗೆ ಮಕ್ಕಳ ವೈದ್ಯರು ಚಿಕಿತ್ಸೆ ಕೊಟ್ಟರು. ವೈದ್ಯರಿಗೆ ಹಲ್ಲೆ ಮಾಡಿದ್ದರಿಂದ ಗಾಯವಾಯಿತು ಎಂದು ತಿಳಿಸಿದ್ದೆವು. ವೆಂಕಟಯ್ಯ, ಬಸವರಾಜು, ಅಂಜಲಿ, ಯೋಗೇಶ ಮತ್ತು ಸ್ವರ್ಣ ಎಂಬ 5 ಜನರು ಹಲ್ಲೆ ಮಾಡಿದ್ದರು ಎಂದು ತಿಳಿಸಿದ್ದೆನು. ಆದರೆ ಸ್ವರ್ಣ ಜಗಳ ಬಿಡಿಸಿದ್ದರು ನಂತರ ಅವರ ಹೆಸರನ್ನು ತೆಗೆದಿದ್ದೆವು. ವೈದ್ಯರಿಗೆ ದೊಣ್ಣೆಯಿಂದ ಹೊಡೆದು ಗಾಯವಾಗಿದೆ ಎಂದು ತಿಳಿಸಿದ್ದೆವು. ವೈದ್ಯರು ನಮ್ಮನ್ನು ಒಳರೋಗಿಯಾಗಿ ದಾಖಲು ಮಾಡಿಕೊಂಡರು. ನಮ್ಮನ್ನು 2 ದಿನಗಳ ನಂತರ ಡಿಸ್ಚಾರ್ಜ್ ಮಾಡಿದರು. ಒಳರೊಗಿಯಾಗಿದ್ದಾಗ ಬೇರೆ ಕಡೆ ಎಲ್ಲೂ ಹೋಗಲಿಲ್ಲ. ನಾನು ಹೇಳಿಕೆ ನೀಡಿದ ಹಾಗೆ ಪೊಲೀಸರು ಬರೆದುಕೊಂಡರು. ನಾನೂ ಸಹ ದೂರು ಬರೆದಿಟ್ಟುಕೊಂಡಿದ್ದೆ, ಆದರೆ ಅದನ್ನು ನೀಡಿರಲಿಲ್ಲ.

8. ಗಲಾಟೆಯಾದ 2 ದಿನಗಳಿಗೆ ದೊಣ್ಣೆಗಳನ್ನು ಪೊಲೀಸರಿಗೆ ನೀಡಿದ್ದೆ. ದಿಃ31/08/2023 ರಂದು ಸಂಜೆ 5.45-6.00 ಗಂಟೆಗೆ ದೊಣ್ಣೆಗಳನ್ನು ಪೊಲೀಸರಿಗೆ ನೀಡಿದ್ದೆ. ದೊಣ್ಣೆಗಳನ್ನು ಪೊಲೀಸರಿಗೆ ನೀಡುವಾಗ ನಾನು ಮತ್ತು ನನ್ನ ಅಣ್ಣ ಕೃಷ್ಣ ಇದ್ದೆವು. ನನ್ನನ್ನು ಮತ್ತು ನನ್ನ ಅಣ್ಣನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಕಾರಿನಲ್ಲಿ ದೊಣ್ಣೆಗಳನ್ನು ನಾವೇ ಹಿಡಿದುಕೊಂಡು ಹೋಗಿ ಠಾಣೆಯ ಮುಂದೆ ಪೊಲೀಸರಿಗೆ ಕೊಟ್ಟೆವು. ದೊಣ್ಣೆಯನ್ನು ಕೊಟ್ಟಾಗ ಏನೋ ಬರೆದುಕೊಂಡರು. ಅದಕ್ಕೆ ಜಯಣ್ಣ, ಕಾಂತರಾಜು, ಮಾದಪ್ಪ ಸಹಿ ಮಾಡಿದ್ದಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿಲ್ಲ. ಅವರನ್ನು ಮಹಜರಿಗೆ ಬನ್ನಿ ಎಂದು ಕರೆಯಲಿಲ್ಲ. ಅವರು ಅಲ್ಲೇ ಹಾಜರಿದ್ದು ಸಹಿ ಮಾಡಿದ್ದರು. ದೊಣ್ಣೆಯನ್ನು ಪೊಲೀಸರಿಗೆ ನೀಡಿದಾಗ ಠಾಣೆಯಲ್ಲೇ ಬರವಣಿಗೆ ಮಾಡಿದರು. ಜಯಣ್ಣ, ಕಾಂತರಾಜು, ಮಾದಪ್ಪ ಮತ್ತು ವೆಂಕಟೇಶ ರವರು ಮನೆಯ ಹತ್ತಿರ ಮಹಜರ್ ಮಾಡಿದಾಗ ಸಹಿ ಮಾಡಿದ್ದರು. ಪೊಲೀಸರು ಊರಿಗೆ ಬಂದ ಮಹಜರ್ ಮಾಡಿದಾಗ 7-8 ಜನ ಸೇರಿದ್ದರು. ಮೇಲ್ಕಂಡ 4 ಜನ ಸಹಿ ಮಾಡಿದ್ದರು, ಅವರನ್ನು

ಬಿಟ್ಟು ಜವರಮ್ಮ, ಮಹದೇವಮ್ಮ ಮತ್ತು ನನ್ನ ತಾಯಿ ಇದ್ದರು. ನಾನು ಈ ಪ್ರಕರಣದಲ್ಲಿ 3–5 ಸಹಿಗಳನ್ನು ಮಾಡಿರಬಹುದು, ಆದರೆ ನಿಖರವಾಗಿ ಗೊತ್ತಿಲ್ಲ. FIR ಕಾಪಿ ತೆಗೆದುಕೊಳ್ಳುವಾಗ, ಮಹಜರ್ ಮಾಡುವಾಗ, ಆಸ್ಪತ್ರೆಯಲ್ಲಿ ಹೇಳಿಕೆ ಕೊಡುವಾಗ ನನ್ನ ಸಹಿಗಳನ್ನು ಮಾಡಿದ್ದೇನೆ.

9. ನನ್ನ ಹೆಂಡತಿಯ ತೋಳಿಗೆ ಹೊಡೆದ ದೊಣ್ಣೆ ಈ ದಿನ ನ್ಯಾಯಾಲಯದ ಮುಂದಿಲ್ಲ ಎಂದರೆ ಸರಿ. 3 ನೇ ಆರೋಪಿಯವರು ನನಗೆ ಹಲ್ಲೆ ಮಾಡಿದ ದೊಣ್ಣೆ ಈ ದಿನ ನ್ಯಾಯಾಲಯದ ಮುಂದಿಲ್ಲ ಎಂದರೆ ಸರಿ. 1 ನೇ ಆರೋಪಿ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು. 1 ಮತ್ತು 2 ನೇ ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿದರು. ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಮತ್ತು ಕೊಲೆ ಬೆದರಿಕೆ ಹಾಕಿದ್ದನ್ನು ನಮ್ಮ ಊರಿನ ಜಯಣ್ಣ, ಕಾಂತರಾಜು ಮತ್ತು ವೆಂಕಟೇಶರವರು ಕೇಳಿಸಿಕೊಂಡಿದ್ದಾರೆ. ಈಗ ಹೇಳಿದ ಜಯಣ್ಣ, ಕಾಂತರಾಜು ಮತ್ತು ವೆಂಕಟೇಶರರವರು ಘಟನಾ ದಿನ ಸಂಜೆ 6.30 ಗಂಟೆಗೆ ಘಟನಾ ಸ್ಥಳದಲ್ಲೇ ಇದ್ದರು. ನಾನು ಹೇಳಿಕೆ ದೂರನ್ನು ಸಲ್ಲಿರುವಾಗ 1 ಮತ್ತು 2 ನೇ ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿದ್ದರು ಎಂದು ತಿಳಿಸಿದ್ದೆ.

10. ನೀವು ಪೊಲೀಸರಿಗೆ ಹೇಳಿಕೆ ನೀಡುವಾಗ ಜಗಳ ಬಿಡಿಸಿ ಮನೆಗೆ ಹೋಗುವಾಗ ಮೇಲ್ಕಂಡವರು ಮುಂದಿನ ದಿನಗಳಲ್ಲಿ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿದರು ಎಂದು ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಗಳು ಎಂದು ತಿಳಿಸಿದ್ದೆ, ಆದರೆ ಪೊಲೀಸರು ಮೇಲ್ಕಂಡವರು ಎಂದು ಬರೆದುಕೊಂಡಿದ್ದಾರೆಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡುವಾಗ 2 ಮತ್ತು 3 ನೇ ಆರೋಪಿತರು ಕೊಲೆ ಬೆದರಿಕೆ ಹಾಕಿದ್ದರು ಎಂದು ನಿಖರವಾಗಿ ತಿಳಿಸಿದ್ದೆ. 1 ನೇ ಆರೋಪಿತ ಅವಾಚ್ಯ ಶಬ್ದಗಳಿಂದೆ ಬೈದರು ಎಂದು ಪೊಲೀಸರಿಗೆ ತಿಳಿಸಿದ್ದೆ.

11. ಜಗಳ ನಡೆಯುವ ಕಾಲಕ್ಕೆ ನನ್ನ ಬಳಿ ವಿವೋ ಮೊಬೈಲ್ ಇತ್ತು. ಈಗಲೂ ನಾನು ಅದನ್ನೇ ಉಪಯೋಗಿಸುತ್ತಿದ್ದೇನೆ. ಗಲಾಟೆಯಾಗುವ 15 ದಿನಗಳ ಮುಂಚೆ ನಾನು ಮತ್ತು 2 ನೇ ಆರೋಪಿ, 3 ನೇ ಆರೋಪಿಯ ಮನೆಯಲ್ಲಿದ್ದೆವು ಎಂದರೆ

ಸರಿಯಲ್ಲ. ಆ ಸಮಯಕ್ಕೆ ನಾನು ನನ್ನ ಮೊಬೈಲ್‌ನಿಂದ 3 ನೇ ಆರೋಪಿ ಸ್ನಾನ ಮಾಡುವುದನ್ನು ವೀಡಿಯೋ ಮಾಡಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಹೆಂಡತಿ 3 ನೇ ಆರೋಪಿ ಬಳಿ ನನ್ನ ಗಂಡ ವೀಡೀಯೋ ಮಾಡಿದ್ದಾರೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು 15 ದಿನಗಳ ಕಾಲ ಊರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ವೀಡಿಯೋ ಮಾಡಿದ ಬಗ್ಗೆ ಊರಿನಲ್ಲಿ ಪಂಚಾಯತಿ ನಡೆದಿತ್ತು ಎಂದರೆ ಸರಿಯಲ್ಲ. ಮೇಲ್ಕಂಡ ಮಾದಪ್ಪ, ಕಾಂತರಾಜು ಮತ್ತು ಇತರರು ಪಂಚಾಯತಿಗೆ ಸೇರಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಬಳಿ ಇದ್ದ ಮೊಬೈಲನ್ನು ಗ್ರಾಮಸ್ಥರು ಹೊಡೆದು ಹಾಕಿದ್ದರು ಎಂದರೆ ಸರಿಯಲ್ಲ. ಈಗ ನಾನು ಉಪಯೋಗಿಸುತ್ತಿರುವ ಮೊಬೈಲ್ ಮೊದಲ ಮೊಬೈಲ್ ಅಲ್ಲ ಎಂದರೆ ಸರಿಯಲ್ಲ. ಆ ವಿಚಾರದಲ್ಲಿ ಮೊದಲಿನಿಂದಲೂ ನಮಗೂ ಮತ್ತು ಆರೋಪಿತರಿಗೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂರು ವರ್ಷಗಳಿಂದ ನಾವು ಮತ್ತು ಆರೋಪಿತರು ಮಾತನಾಡುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ಕೃಷ್ಣನಿಗೂ ಮತ್ತು ಆರೋಪಿತರಿಗೂ ಜಗಳವಾಗಿತ್ತು, ಅಂದಿನಿಂದ ನಾವು ಮತ್ತು ಆರೋಪಿತರು ಮಾತನಾಡುತ್ತಿಲ್ಲ.

12. ನನ್ನ ಮಗನ ಬಲಗೆನ್ನೆಗೆ 3 ನೇ ಆರೋಪಿಯ ಮಗ ಪರಚಿರಲಿಲ್ಲ ಮತ್ತು ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗನಿಗೆ ಬುದ್ದಿವಾದ ಹೇಳುತ್ತಿದ್ದಾಗ 1 ನೇ ಆರೋಪಿತ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ಬಂದು ಚಾಸಾ-2 ರವರ ರಟ್ಟೆಗೆ 4 ನೇ ಆರೋಪಿ ರಿಪೀಸ್ ಪಟ್ಟೆಯಿಂದ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಎಡಕತ್ತಿಗೆ ರಿಪೀಸ್ ಪಟ್ಟೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಕತ್ತನ್ನು ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರಿಂದ 6 ರವರು ಜಗಳ ಬಿಡಿಸಿಲ್ಲ ಮತ್ತು ಅವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು

ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಪೊಲೀಸರು ಬಂದಿಲ್ಲ ಮತ್ತು ಮಹಜರ್ ಕ್ರಮ ಜರುಗಿಸಿಲ್ಲ, ಸ್ಥಳದಲ್ಲಿ ಸಾಕ್ಷಿದರರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ನಮಗೂ ದ್ವೇಷ ಇರುವ ಕಾರಣ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಕಾನೂನು ಬಾಹಿರವಾಗಿ 3 ನೇ ಆರೋಪಿಯ ಚಿತ್ರೀಕರಣ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪನ್ನು ಮುಚ್ಚಿಕೊಳ್ಳಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಬೆಟ್ಟದಪುರದಲ್ಲೂ ಸಂಜೆಯ ನಂತರ ವೈದ್ಯರು ಚಿಕಿತ್ಸೆ ನೀಡುತ್ತಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**